ಕೃಷಿ ತಾಂತ್ರಿಕ ಶಾಲೆಗಳ ಬಗ್ಗೆ

೧೩೪ (೫೮೫) ಶ್ರೀ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕೃಷಿ ತಾಂತ್ರಿಕ ಶಾಲೆಗಳನ್ನು ರಾಜ್ಯದಲ್ಲಿ ಪ್ರಾರಂಭಿಸುವ ಯೋಜನೆ ಇದೆಯೆ, ಹಾಗಿದ್ದಲ್ಲಿ ಯಾವಾಗಿನಿಂದ ಪ್ರಾರಂಭಿಸಲಾಗುವುದು?

ಆ) ದೇವಿ ಹೋಸೂರ ಒಕ್ಕಲತನದ ಶಾಲೆ ಮೊಟ್ಟ ಮೊದಲು ರಾಜ್ಯದಲ್ಲಿಯೇ ಹೆಚ್ಚು ಫಲವತ್ತಾದ ಭೂಮಿಯನ್ನು ಪಡೆದುಕೊಂಡು ಪ್ರಾರಂಭಿಸಿದ ಶಾಲೆ ಅಲ್ಲವೆ?

ಇ) ಬಸವ ಜಲಾಶಯ ಹೆಸರು ಪಡೆಯಲ್ಲಿರುವ ಪ್ರದೇಶದ ಸುತ್ತಲೂ ಉತ್ತಮವಾದ ಫಲವತ್ತಾದ ಭೂಮಿ ಇರುವುದು ಸರ್ಕಾರದ ಗಮನದಲ್ಲಿದೆಯೆ?

ಈ) ಹಾಗಿದ್ದಲ್ಲಿ ಅಲ್ಲಿ ಕೃಷಿ ಶಾಲೆಯನ್ನು ಪ್ರಾರಂಭಿಸಲಾಗುವುದೆ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).—

ಅ) ಇದೆ. ಇದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಆ) ಹೌದು.

ಇ) ಇದೆ.

ಈ) ರಾಜ್ಯದ ಪ್ರತಿಯೊಂದು ಕಂದಾಯ ವಿಭಾಗದಲ್ಲಿ ಒಂದೊಂದು ಕೃಷಿ ತಾಂತ್ರಿಕ ಶಾಲೆಯನ್ನು ಸ್ಥಾಪಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ. ಅಂತಹ ಶಾಲೆಗಳನ್ನು ಯಾವ ಸ್ಥಳದಲ್ಲಿ ಸ್ಥಾಪಿಸುವುದು ಎನ್ನುವ ಬಗ್ಗೆ ಸದ್ಯದಲ್ಲಿಯೇ ನಿರ್ಧಾರ ತೆಗೆದುಕೊಳ್ಳಲಾಗುವುದು.

ಬಳ್ಳಾರಿ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಷ್ಟು ಹತ್ತಿ ಬೆಂಕಿಯಿಂದ ಸುಟ್ಟು ಹೋದ ಬಗ್ಗೆ

೧೩೫ (೨೬೫) ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.—

ಅ) ಬಳ್ಳಾರಿ ಜಿಲ್ಲೆಯಲ್ಲಿ ಕೋಟ್ಯಾಂತರ ರೂಪಾಯಿ ಬೆಲೆ ಬಾಳುವಷ್ಟು ಹತ್ತಿ ಇತ್ತೀಚೆಗೆ ಬೆಂಕಿಯಿಂದ ಸುಟ್ಟು ಹೋದದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಈ ದುರ್ಘಟನೆಯಲ್ಲಿ ಹಾನಿಗೊಳಗಾದಂತಹ ರೈತರಿಗೆ ಪರಿಹಾರ ಧನ ಕೊಡಲಾಗುವುದೇ?

ಇ) ಹಾಗಿದ್ದಲ್ಲಿ ಆದರ ವೊತ್ತವೆಷ್ಟು?

ಈ) ಈ ಬೆಂಕಿ ಅನಾಹುತಕ್ಕೆ ಕಾರಣಗಳೇನು?

ಉ) ಸಂಬಂಧಪಟ್ಟವರ ವಿರುದ್ಧ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ಹೌದು. ಹಲವು ಲಕ್ಷ ರೂಪಾಯಿಗಳು ನಷ್ಟ ಆದ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆ.

ಆ) ಸದರಿ ಬೆಂಕಿ ಅಪಘಾತದಲ್ಲಿ ಹಾನಿಗೊಳಗಾದ ವ್ಯಕ್ತಿಗಳು ಮತ್ತು ಸಂಸ್ಥೆಗಳು ತಮ್ಮಲ್ಲಿರುವ ದಶ್ತಿ ಸಂಸ್ಥೆಗೆ ವಿಮೆ ಮಾಡಿಸಿದ್ದರಿಂದ ಸರ್ಕಾರದಿಂದ ಪರಿಹಾರ ಧನ ಪಡೆಯಲು ಅರ್ಹರಿರುವುದಿಲ್ಲ.

ಇ) ಪ್ರಶ್ನೆ (ಅ) ಉತ್ತರದಿಂದ ಉದ್ಭವಿಸುವುದಿಲ್ಲ.

ಈ) ಈ ಅನಾಹುತದಲ್ಲಿ ಕಾರಣಗಳೇನೆಂಬುದು ಗೊತ್ತಾಗಿಲ್ಲ. ಪಿ.ಬಿ.ಐ. ಮತ್ತು ಪಿ.ಒ.ಡಿ. ಸಂಸ್ಥೆಗಳು ಈ ಅನಾಹುತದ ಕಾರಣಗಳ ಬಗ್ಗೆ ಪರಿಶೋಧನೆ ನಡೆಸುತ್ತಿದ್ದಾರೆ.

ಉ) ಈ ಅನಾಹುತದಲ್ಲಿ ಕಾರಣವಾದ ಘಟನೆಗಳ ಬಗ್ಗೆ ಪಿ.ಬಿ.ಐ. ಮತ್ತು ಪಿ.ಒ.ಡಿ.ಗಳು ತನಿಖೆ ಮಾಡುತ್ತಿರುವುದರಿಂದ ತನಿಖೆಯ ವರದಿಗಳು ಬಂದ ನಂತರ ಆ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.